ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 12ನೇ ಮೇ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

(ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿ ಕುಳಿತಿದ್ದರು)

ಕೃಷ್ಣಾ ಮೇಲ್ದಂಡೆ ಯೋಜನೆಯ ಅವ್ಯವಹಾರದ ಬಗ್ಗೆ ಸದನದ ಸಮಿತಿ ವರದಿ ಒಪ್ಪಿಸಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇವಲ್ಲಿ): ಮಾನ್ಯ ಅಧ್ಯಕ್ಷರೇ ನಾವೆಲ್ಲಾ ನಿನ್ನೆಯ ದಿವಸ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರಲ್ಲಿ ಅಪೀಲ್ ಮಾಡಿಕೊಂಡಿದ್ದೆವು. ಸರ್ಕಾರದ ಪರವಾಗಿ ಮಾನ್ಯ ನಾಗೇಗೌಡರು ಅಪೀಲ್ ಮಾಡಿಕೊಂಡಿದ್ದಾರೆ. ಮಾನ್ಯ ಯಡಿಯೂರಪ್ಪನವರೂ ಸಹ ಅದೇ ರೀತಿಯ ಸೂಚನೆ ಕೊಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೊಟ್ಟಂತೆ ನಮ್ಮ ಕಾಂಗ್ರೆಸ್‌ನ ಎಲ್ಲಾ ಸ್ನೇಹಿತರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಸಲಹೆಯಂತೆ ನಾವೆಲ್ಲಾ ಸ್ಥಳಕ್ಕೆ ಹೋಗಿ ತನಿಖೆ ಮಾಡೋಣ. ಎಲ್ಲಾ ಪಕ್ಷದ ಸದಸ್ಯರು ಅಲ್ಲಿ ಹೋಗಿ, ನಾವೆಲ್ಲಾ ಹೋಗಿ ನೋಡಿ ನಮಗೆ ಕನ್‌ವಿನ್ಸ್ ಆಗದಿದ್ದರೆ ನಾವೆಲ್ಲ ಸೇರಿ ಒಟ್ಟಾಗಿ ಸರ್ಕಾರವನ್ನು ತನಿಖೆಗೆ ಒತ್ತಾಯ ಮಾಡೋಣ. ಬಹುಶಃ ಉಳಿದ ಚರ್ಚೆಗೂ ಅನುಕೂಲವಾಗಬಹುದು. ನಾನು ನಮ್ಮ ಕಾಂಗ್ರೆಸ್ -ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೊಟ್ಟಂತೆ ನಾವೆಲ್ಲಾ ಹೋಗಿ ಬಂದ ಮೇಲೆ ನಂತರ ಕಾರ್ಯಕ್ರಮ ರೂಪಿಸೋಣ. ಈಗ ನಾನು ವಿನಂತಿ ಮಾಡುತ್ತೇನೆ ಅವರು ಧರಣಿ ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಯಾರ್ಯಾರು ಹೋಗುವುದು, ಎಂಬುದನ್ನು ತಾವು ತೀರ್ಮಾನ ಮಾಡಬೇಕು.

ಅಧ್ಯಕ್ಷರು : ನಾವೆಲ್ಲಾ ಆಮೇಲೆ ಕುಳಿತು ಮಾತನಾಡೋಣ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಮಾನ್ಯ ವಿರೋಧಪಕ್ಷದ ನಾಯಕರು ಬಿ ಜೆ ಪಿ

ಮುಖಂಡರು ಮತ್ತು ಇತರೆ ಸದಸ್ಯರು ಸ್ಥಳಕ್ಕೆ ಹೋಗಿ ಇರತಕ್ಕಂಥ ವಾಸ್ತವಾಂಶವನ್ನು ನೋಡಿದರೆ. ನಿಜಾಂಶವನ್ನು ಹೊರಬೀಳುತ್ತದೆ. ಆದ್ದರಿಂದ ತಾವೇ ಮುಖಂಡತ್ವವನ್ನು ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ ತಾವು ಯಾವ ತಾರೀಖಿಗೆ ನಿಗದಿ ಮಾಡುತ್ತೀರಿ ಆ ತಾರೀಖಿಗೆ ಸರ್ಕಾರ ಎಲ್ಲಾ ವ್ಯವಸ್ಥೆಯನ್ನು ಮಾಡುವುದಕ್ಕೆ ತಯಾರಾಗಿದೆ.

ಅಧ್ಯಕ್ಷರು : ದಯಮಾಡಿ ಸಹಕರಿಸಿ ಖರ್ಗೆಯವರೇ. ನಾವು ಬೇರೆ ಬಿಜಿನೆಸ್‌ಗೆ ಹೋಗೋಣ.

+ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ ಈ ಸದನದ ಸಮಯವನ್ನು ವ್ಯರ್ಥ ಮಾಡಬೇಕೆನ್ನುವ ಇಚ್ಛೆ ನಮ್ಮ ಪಕ್ಷದ ಯಾವ ಸದಸ್ಯರಿಗೂ ಕೂಡ ಇಲ್ಲ. ಮತ್ತು ಮಹತ್ವವಾದಂತಹ ಅನೇಕ ವಿಷಯಗಳು ಏನು ಇವೆ. ಅದರ ಬಗ್ಗೆ ಕೂಡ ಪ್ರಸ್ತಾಪ ಮಾಡಬೇಕು ಎನ್ನತಕ್ಕಂಥಾ ಇಚ್ಛೆ ಕೂಡ ನಮಗೆ ಇದೆ. ಆದರೆ ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ನಾಗೇಗೌಡರು ಸಂಪೂರ್ಣವಾಗಿ ಉತ್ತರ ಕೊಡುವುದಕ್ಕಿಂತ ಮುಂಚೆಯೇ ಮಧ್ಯೆ ಪ್ರವೇಶ ಮಾಡಿ ನೀವು ಏನೇ ಮಾಡಿದರೂ ಕೂಡ ನೀವು ಏನೇ ಕೇಳಿದರೂ ಕೂಡ ನಾನು ಯಾವುದೇ ತನಿಖೆಗೆ ಒಪ್ಪುವುದಿಲ್ಲ. ಮತ್ತು ಯಾವುದೇ ವಿಚಾರಣೆಯನ್ನು ಮಾಡುವಂತಹ ಅವಶ್ಯಕತೆ ಇಲ್ಲ. ತಾವು ಸಿ ಬಿ ಐ ವಿಚಾರಣೆ ಮಾಡಿ ಎಂದು ಕೇಳಿದರೂ ಕೂಡ ಅದರಲ್ಲಿ ಯಾವುದೇ ಹುರುಳು ಇಲ್ಲ ಎನ್ನತಕ್ಕಂಥ ಮಾತನ್ನು ಪ್ರಸ್ತಾಪ ಮಾಡಿದರು. ಇದು ಏನಾಗುತ್ತದೆ ಅಂದರೆ ಅವರು ಮೊದಲೇ ಡಿಟರ್‌ಮೈನ್ ಮಾಡಿದ್ದರು. ನಾವು ಯಾರೇ ಎಷ್ಟೇ ವಿಷಯವನ್ನು ಪ್ರಸ್ತಾಪ ಮಾಡಿದರೂ ಕೂಡ ಅದರಲ್ಲಿ ಎಷ್ಟೇ ಹುರುಳು ಇದ್ದರೂ ಕೂಡ ಅದನ್ನು ಕಡೆಗಣಿಸಬೇಕು ಎನ್ನತಕ್ಕಂಥ ತೀರ್ಮಾನವನ್ನು ಅವರು ತೆಗೆದುಕೊಂಡಂತೆ ಕಾಣುತ್ತದೆ. ಅದಕ್ಕಾಗಿಯೇ ಮಾನ್ಯ ಮಂತ್ರಿಗಳ ಉತ್ತರ ಮುಗಿಯುವುದಕ್ಕಿಂತ ಮುಂಚೆಯೇ ಮಾನ್ಯ ಮುಖ್ಯಮಂತ್ರಿಗಳು ನಾನು ಸಿ ಬಿ ಐ ಗೆ ಒಪ್ಪುವುದಿಲ್ಲ ತಾವು ಏನು ಬೇಕಾದರೂ ಮಾಡಿಕೊಳ್ಳಿ ಎನ್ನುವಂತಹ ಧಾಟಿಯಲ್ಲಿಯೇ ಹೇಳಿದರು. ಇವತ್ತು ಇದು ಏನಾಗಿದೆ ಅಂದರೆ ಇದು ಇಡೀ ಸದನದ ಗಮನಕ್ಕೆ ಬಂದಿದೆ. ಇಂತಹ ಒಂದು ದೊಡ್ಡ ಹಗರಣ. ಆದರೂ ಕೂಡ ಇದನ್ನು ಯಾರೂ ಕೇಳುವವರೇ ಇಲ್ಲವಲ್ಲಾ ಎನ್ನುವಂತಹ ಪ್ರಶ್ನೆ ಬಂದಿದೆ. ಇಂತಹ ಒಂದು ದೊಡ್ಡ ಹಗರಣವನ್ನು ಸಿ ಬಿ ಐ ವಾದ ವಿಚಾರಣೆ ಮಾಡಿಸಲು ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ. ಎನ್ನತಕ್ಕಂಥಾದ್ದೂ ಸಹ ಇವತ್ತು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆ. ಮತ್ತು ಈಗ ನಮ್ಮ ಅನೇಕ ವಿರೋಧಪಕ್ಷದ ನಾಯಕರು ಮತ್ತು ಸದಸ್ಯರು ವಾಕ್‌ಔಟ್ ಮಾಡಿ ಪ್ರತಿಭಟನೆಯನ್ನು ತೋರಿಸಿದ್ದಾರೆ. ಎಸ್ಟಿಮೇಟ್ ಕಮಿಟಿಯ ವರದಿ ಇವತ್ತು ನಮ್ಮ ಮುಂದೆ ಇರುವಾಗ ಮತ್ತು ಆ ವರದಿ ಇವತ್ತು ಈ ಸದನದ ಸ್ವತ್ತು ಆದಾಗ ಮತ್ತು ಆ ವರದಿಯಲ್ಲಿ ಈ ವಿಷಯವನ್ನು ಸಿ ಬಿ ಐ ವಿಚಾರಣೆಗೆ ವಹಿಸಿಕೊಡಬೇಕೆಂದು ಇದ್ದಾಗಲೂ ಸಹ ಇವತ್ತು ಸರ್ಕಾರ ಅದಕ್ಕೆ ಹಿಂದೇಟು ಹಾಕುತ್ತಿದೆ ಅಂದರೆ ಏನೋ ಒಂದು ವಿಷಯವನ್ನು ಇವತ್ತು ಇವರು ಮುಚ್ಚಿಡುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ ಎನ್ನತಕ್ಕಂಥ ಒಂದು ಸಂಶಯ ಬರತಕ್ಕಂಥಾದ್ದು ಸಹಜ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ಬೇಕಾದರೆ ತಾವು ಇಡೀ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳಿ. ನಾವು ಇಲ್ಲಿ ಬಂದು ಕೂರುತ್ತೇವೆ ಅವರು ಆ ಕಡೆ ಕೂರಲಿ. ಈ ಸದನ ಸಿ ಬಿ ಐ ವಿಚಾರಣೆಗೆ ಒಪ್ಪಿಸಬೇಕೆಂದು ಆದರೆ ಮಾಡಿ ಸದನ ಬೇಡ

ಅಂದರೆ ಬಿಟ್ಟು ಬಿಡೋಣ. ಸರ್ಕಾರ ಬೇಕಾದರೆ ಈ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳಲಿ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಈ ಸದನ ಬಹಳ ಮುಖ್ಯ. ಮೆಜಾರಿಟಿ ಜನ ಏನು ಹೇಳುತ್ತಾರೋ ಅದೇ ಮುಖ್ಯ. ಈ ಸದನ ಬೇಡ ಅಂದರೆ ನೋಡೋಣ. ಆದರೆ ಇವತ್ತು ಎಸ್ಟಿಮೇಟ್ ಕಮಿಟಿಯವರು ಒಂದು ಅಭಿಪ್ರಾಯವನ್ನು ಕೊಟ್ಟಮೇಲೆ ಸರ್ಕಾರದವರು ಅದನ್ನು ಇಷ್ಟು ತಿರಸ್ಕಾರ ಭಾವನೆಯಿಂದ ನೋಡುತ್ತಿದ್ದಾರೆಂದರೆ ಅದಕ್ಕೆ ಕಾರಣವೇನೋ ಗೊತ್ತಾಗುತ್ತಿಲ್ಲ. ಎರಡನೆಯದು ತಾವು ಹೇಳಿದಿರಿ ಮಾನ್ಯ ಮುಖ್ಯಮಂತ್ರಿಗಳು ಒಂದು ಸಲಹೆ ಕೊಟ್ಟಿದ್ದಾರೆಂದು ಮತ್ತು ಮಾನ್ಯ ಯಡಿಯೂರಪ್ಪನವರು ಒಂದು ಸಲಹೆ ಕೊಟ್ಟರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಒಂದು ಸಲಹೆ ಮಾಡಿದರು. ಫ್ಲೋರ್ ಲೀಡರ್ಸ್ ಎಲ್ಲರೂ ಸಹ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಭೇಟಿ ನೀಡಿ ಅಲ್ಲಿ ಯಾವ ರೀತಿಯಾಗಿ ಕೆಲಸ ನೆಡೆದಿದೆ ಎನ್ನತಕ್ಕಂಥಾದ್ದರ ಬಗ್ಗೆ ನೋಡಿಕೊಂಡು ಬರಬೇಕು ಎಂದು. ನೋಡಿಕೊಂಡು ಬರುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಆಪಾದನೆ ಮಾಡಿದ್ದೇ ನೀವು ಕೆಲಸ ನಿಲ್ಲಿಸಿದ್ದೀರಿ. ಹಣ ಬಿಡುಗಡೆ ಮಾಡುತ್ತಿಲ್ಲ. ಸುಮ್ಮನೇ ಹೇಳಿಕೆಗಳು ಮಾತ್ರ ಬರುತ್ತಿವೆ ಎನ್ನತಕ್ಕಂಥಾದ್ದು ಸ್ಪಷ್ಟ. ಕೆಲಸ ನೆಡೆಯುತ್ತಿದ್ದರೆ ಸಂತೋಷ. ಅಲ್ಲಿಗೆ ಹೋಗಿ ನೋಡಿಕೊಂಡು ಬರುವುದಕ್ಕೆ ನಾವು ಯಾವಾಗಲೂ ಕೂಡ ಸಿದ್ಧರಾಗಿದ್ದೇವೆ. ಆದರೆ ಅವರು ಈ ಒಂದು ಮಾತಿಗೆ ಏಕೆ ಹಿಂದೇಟು ಹಾಕುತ್ತಿದ್ದಾರೋ ಅದು ಗೊತ್ತಿಲ್ಲ. ಆದರೆ ಅವರು ಅನೇಕ ಸಾರಿ ಬಹಳ ಲಿಬರಲ್ ಆಗಿ ಮಾತನಾಡುತ್ತಾರೆ. ಆದರೆ ಇದು ಒಂದು ಸಣ್ಣ ವಿಷಯ. ಎರಡೇ ಜಿ.ಓ. ದೊಡ್ಡದು ಅಲ್ಲ. ಎರಡು ಹಾಳೆ. ಅದರಲ್ಲಿರತಕ್ಕಂಥಾದ್ದರ ಬಗ್ಗೆ ಮಾತ್ರ ನಾವು ಪ್ರಸ್ತಾಪ ಮಾಡುತ್ತಿರುವುದು. ಆದರೂ ಕೂಡ ಅವರು ಏಕೋ ಹಿಂದೇಟು ಹಾಕುತ್ತಿದ್ದಾರೆ, ಆದರೆ ದಯವಿಟ್ಟು ನಾನು ಅವರಲ್ಲಿ ಒಂದು ಸಲ ಕೇಳಿಕೊಳ್ಳುತ್ತೇನೆ. ಈಗ ನಾವು ಹೋಗಿ ನೋಡಿಕೊಂಡು ಬಂದೆವು ಎಂದು ತಿಳಿದುಕೊಳ್ಳಿ. ಅದು ಆದ ಮೇಲೆ ನಮಗೆ ಸಮಾಧಾನ ತರದೇ ಇದ್ದರೆ ಅವರು ಸಿ ಬಿ ಐ ಗೆ ರೆಫರ್ ಮಾಡುತ್ತಾರಾ? ಆದರೆ ತರಾತುರಿಯಲ್ಲಿ ಆದರೆ ನಡೆಯುವುದಿಲ್ಲ, ಅದಕ್ಕೆ ಈ ಪ್ರಶ್ನೆ ಬಂದಿದ್ದು. ಇದರ ಬಗ್ಗೆ ನಾನು ಸರ್ಕಾರಕ್ಕೆ ಇನ್ನೊಂದು ಸಲ ಮನವಿ ಮಾಡಿಕೊಳ್ಳುತ್ತೇನೆ. ನೀವು ಇದನ್ನು ಸಿ ಬಿ ಐಗೆ ರೆಫರ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳಿಕೊಂಡು ಬಂದು ಮುಂದೆ ನಮಗೆ ಒಂದು 5 ನಿಮಿಷ ಅವಕಾಶ ಕೊಟ್ಟರೆ ನಾವು ಸಹ ಮಾತನಾಡಿಕೊಂಡು ಬರುವುದಕ್ಕೆ ಅವಕಾಶವಾಗುತ್ತದೆ.

+ ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ಸದನದ ಅಭಿಪ್ರಾಯವನ್ನು ಪಡೆಯಿರಿ; ಎಸ್ಟಿಮೇಟ್ ಕಮಿಟಿ ವರದಿ ಬಗ್ಗೆ ಎನ್ನತಕ್ಕಂಥ ಒಂದು ಮಾತನ್ನು ಹೇಳಿದ್ದಾರೆ. ತಾವು ಈಗಾಗಲೇ ಹೇಳಿದ್ದೀರಿ ಎಸ್ಟಿಮೇಟ್ ಕಮಿಟಿ ವರದಿ ಬಗ್ಗೆ ಚರ್ಚೆ ಆಗಿಲ್ಲ. ತಾವು ಕೊಟ್ಟಿರತಕ್ಕಂಥ ನಿಯಮ 69ರ, ನೋಟೀಸ್ ಕೆಳಗೆ ವಿಚಾರಗಳನ್ನು ಚರ್ಚೆ ಮಾಡುವಂತಹ ಕಾಲದಲ್ಲಿ ಎಸ್ಟಿಮೇಟ್ ಕಮಿಟಿ ಕೊಟ್ಟಿರತಕ್ಕಂಥ ವರದಿ ಬಗ್ಗೆ ರೆಫರ್ ಮಾಡಿದ್ದೀರೇ ವಿನಹಃ ಈ ಸದನದ ಮುಂದೆ ಎಸ್ಟಿಮೇಟ್ ಕಮಿಟಿ ವರದಿಯು ಚರ್ಚೆಗೆ ಬಂದಿಲ್ಲ. ಆದ್ದರಿಂದ

ಸರ್ಕಾರ ಈ ಸದನದ ಒಪ್ಪಿಗೆಯನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಬರುವುದಿಲ್ಲ. ಎರಡನೆಯದು ನಾವು ಹೋಗಿ ನೋಡಿಕೊಂಡು ಬಂದು ನಮಗೆ ಸಮಾಧಾನವಾಗದೇ ಇದ್ದರೆ ಮತ್ತೆ ಸಿ.ಬಿ.ಐ.ಗೆ ರೆಫರ್ ಮಾಡುತ್ತಾರೆಯೇ ಎಂದು ಕೇಳಿದರು. ಷರತ್ತಿನ ಮೇಲೆ ಹೋಗಿ ನೋಡಿಕೊಂಡು ಬರುವುದು ಒಳ್ಳೆಯದಲ್ಲ. ಅವರು ಒಪನ್ ಮೈಂಡ್‌ನಿಂದ ಆ ಸ್ಥಳಕ್ಕೆ ಹೋಗಲಿ. ನಾವೆಲ್ಲರೂ ಹೋಗೋಣ ನಾವು ಬರುತ್ತೇವೆ. ನಾವು ಅಲ್ಲಿ ಕುಳಿತುಕೊಂಡು ಯಾವುದೇ ವಿಷಯವನ್ನು ಬೇಕಾದರೂ ಚರ್ಚೆ ಮಾಡೋಣ. ರಾಜ್ಯದ ಜನರ ಹಿತದೃಷ್ಟಿಯಿಂದ ಅಲ್ಲಿ ಏನಾಗಿದೆ ಎನ್ನತಕ್ಕಂಥ ಸತ್ಯಾಂಶಗಳನ್ನು ನೋಡಿಕೊಂಡು ಬಂದರೆ ಅದರಿಂದ ಅನುಕೂಲವಾಗುತ್ತದೆಂದು ನಾನು ಮತ್ತೊಮ್ಮೆ ಮನವಿ ಮಾಡುತ್ತೇನೆ. ಅವರು ಆ ಷರತ್ತಿನ ಒಳಗೆ ಪ್ರವಾಸ ಮಾಡುವುದು ಬೇಡ. ಒಪನ್ ಮೈಂಡ್‌ನಿಂದ ಹೋಗೋಣ. ನಾನು ಸರ್ಕಾರಕ ಪರವಾಗಿ ಮಾನ್ಯ ವಿರೋಧಪಕ್ಷದ ನಾಯಕರಿಗೆ ಪ್ರಾರ್ಥನೆ ಮಾಡುತ್ತೇನೆ. ಸಿ.ಬಿ.ಐ. ತನಿಖೆಯ ಅವಶ್ಯಕತೆ ಇಲ್ಲ ಇವತ್ತಿನ ಸಂದರ್ಭದಲ್ಲಿ.

+ ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ನಾನು ಬಹಳ ಮುಖ್ಯವಾದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಎಕೆ ಅಪೇಕ್ಷಿಪಟ್ಟಿದ್ದೇನೆ ಅಂದರೆ ಈಗ ಅಂದಾಜು ಸಮಿತಿ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ. ಅವರೇ ಹೇಳುತ್ತಾರೆ ಸರ್ಕಾರ ಖಂಡಿತವಾಗಿ ಇನ್ನೂ ಆ ವರದಿಯನ್ನು ಪರಿಶೀಲನೆ ಮಾಡಿಲ್ಲ ಎಂದು. ನನಗೆ ಗೊತ್ತಿದ್ದ ಪ್ರಕಾರ. ಅದರಲ್ಲೂ ಕೂಡ ಅವರು ಒಂದು ಗಂಭೀರವಾದ ಆಪಾದನೆಯನ್ನು ಮಾಡಿ ಒಂದು ಗಂಭೀರವಾದಂತಹ ವಿಚಾರವನ್ನು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಏನೆಂದರೆ ಇದನ್ನು ಸಿ.ಬಿ.ಐಗೆ ಕೊಡಬೇಕು ಎಂದು. ಕೆಲವು ಸಮಿತಿಗಳು ಶಿಫಾರಸ್ಸು ಮಾಡಿದ ಎಲ್ಲಾ ಅಂಶಗಳನ್ನು ಸರ್ಕಾರ ಒಪ್ಪುತ್ತದೆ ಎನ್ನುವ ಹುಚ್ಚು ನಮಗೆ ಇಲ್ಲ. ಆದರೆ ಗಂಭೀರವಾದಂತಹ ಆಪಾದನೆ ಮತ್ತು ಗಂಭೀರವಾದಂತಹ ಶಿಫಾರಸ್ಸು ಮಾಡಿದಾಗ ತಮ್ಮ ಸೂಕ್ತವಾದಂತಹ ಕ್ರಮ ಏನೆಂದರೆ ತಾವು ಇದನ್ನು ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಬೇಕಿತ್ತು. ಸಂಬಂಧಪಟ್ಟ ಮಂತ್ರಿಗಳು ಇವತ್ತು ಉತ್ತರ ಕೊಡಬಹುದು. ಆದರೆ ನಾವು ಒಂದು ಅಂಶವನ್ನು ಮರೆಯಬಾರದು. ಇಲ್ಲ ನಾವು ಒಂದು ಕೆಟ್ಟ ಸಂಪ್ರದಾಯವನ್ನು ಹಾಕಬಾರದು. ನಾವು ಅನೇಕ ವರ್ಷಗಳಿಂದ ಇಂತಹ ಸಂಪ್ರದಾಯಗಳನ್ನು ಖಂಡಿಸುತ್ತಾ ಬಂದಿದ್ದೇವೆ. ಅದೇನೆಂದರೆ ಯಾರಾದರೂ ಒಬ್ಬ ಮಂತ್ರಿ ವರದಿಗಳ ಮೇಲೆ ಕಾಮೆಂಟ್ಸ್ ಮಾಡತಕ್ಕಂಥಾದ್ದು, ಸೆನ್ಸಾರ್ ಮಾಡತಕ್ಕಂಥಾದ್ದು ಅದು ಎಂದಿಗೂ ಸರಿಯಲ್ಲ. ತಾವು ಅದನ್ನು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಸಕಾರಣವಾಗಿ ನಾವು ಒಪ್ಪುವುದಿಲ್ಲ ಎಂದು ಹೇಳತಕ್ಕಂಥಾದ್ದನ್ನು ಯಾರು ಮಾಡಬೇಕು? ಆ ಇಲಾಖೆಯಲ್ಲಿ ಪರಿಶೀಲನೆ ಮಾಡಿಕೊಂಡು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಪರಿಶೀಲನೆ ಮಾಡಿಕೊಂಡು ಕ್ಯಾಬಿನೆಟ್‌ನವರು ತೀರ್ಮಾನ ಮಾಡಿ ಆದ ಮೇಲೆ ತಾವು ನಿರ್ಣಯ ಹೇಳಬೇಕೇ ಹೊರತು ಬೇರೆ ಅಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತು ಈ ವರದಿ ಇರಬಹುದು. ಇನ್ನು ಮುಂದೆ ಅನೇಕ ವರದಿಗಳು ಬರುತ್ತವೆ. ಆ ವರದಿಗಳಿಗೆ ಮಹತ್ವವೇ ಬರುವುದಿಲ್ಲ. ಸರ್ಕಾರ ಏಕಪ್ರಕಾರ ನಾವು ಅದನ್ನು ತಿರಸ್ಕಾರ ಮಾಡುತ್ತೇವೆ ಅದರಲ್ಲಿ ಹುರುಳು ಇಲ್ಲ ಎಂದು ಹೇಳತಕ್ಕಂಥಾದ್ದು ಮತ್ತೊಂದು ವಾದ ಇರಬಹುದು. ಅಥವಾ

ಅದನ್ನು ತಿರಸ್ಕರಿಸತಕ್ಕಂಥ ಸಕಾರಣ ಇರಬಹುದು. ಆದರೆ ಈ ರೀತಿಯಲ್ಲಿ ಅಂದಾಜು ಸಮಿತಿಯ ವರದಿಯನ್ನು ಚೀಟ್ ಮಾಡತಕ್ಕಂಥಾದ್ದು ಏನು ಇದೆ ನಾವು ಕೆಲವರು ನಾವು ಆ ವರದಿಗೆ ಸಹಿ ಹಾಕಲಿಲ್ಲ ಎಂದು ಹೇಳತಕ್ಕಂಥಾದ್ದು ಕೆಲವರು ನಾವು ಆ ವರದಿಯನ್ನು ನೋಡಿಲ್ಲ ಎಂದು ಹೇಳತಕ್ಕಂಥಾದ್ದು ಇದು ಈ ಸದನದ ಸದಸ್ಯರಿಗೆ ಅಗಲಿ ಅಥವಾ ಈ ಸದನಕ್ಕೆ ಅಗಲಿ ಶೋಭೆಯನ್ನು ತರತಕ್ಕಂಥ ಮಾತುಗಳು ಅಲ್ಲ. ಇಂತಹ ಪ್ರಸಂಗಗಳು ನಡೆಯಬಾರದು. ತಾವೂ ಕೂಡ ನಿನ್ನೆ ಅದನ್ನು ಅಬಸರ್ವ್ ಮಾಡಿದ್ದೀರಿ. ಆದ್ದರಿಂದ ಇದು ಬಹಳ ಪ್ರಾಮುಖ್ಯ. ಎಷ್ಟೇ ಇರಲಿ ತಪ್ಪು ಇರಲಿ ಮಾಹಿತಿಗಳು ಸರಿಯಾಗಿ ಬಂದಿರುವುದಿಲ್ಲ. ಮಾಹಿತಿಗಳು ಬಂದಿರಬಹುದು, ಅಧಿಕಾರಿಗಳು ಕೆಲವು ಕೊಟ್ಟಿರಬಹುದು, ಕೊಡದೇ ಇರಬಹುದು ಈ ಪರಿಸ್ಥಿತಿ ಎಲ್ಲಾ ಸಮಿತಿಗಳ ಇತಿಮಿತಿಯಲ್ಲಿ ಈ ಪರಿಸ್ಥಿತಿ ಬರುತ್ತದೆ. ಈಗ ನಾವು ಸರ್ಕಾರದ ಮುಂದೆ ಇಟ್ಟಿರತಕ್ಕಂಥಾದ್ದು ಸಿ ಬಿ ಐ ತನಿಖೆ ಮಾಡಬೇಕೆಂದು. ತಾವು ದಯಮಾಡಿ ಎಲ್ಲಾ ಇಲಾಖೆಗಳ ಪರಿಶೀಲನೆ ಮಾಡಿ ತಮ್ಮ ಕ್ಯಾಬಿನೆಟ್‌ನಲ್ಲಿ ಪರಿಶೀಲನೆ ಮಾಡಿ ಆಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬಹುದು. ಈ ಕುರಿತು ಸಿಬಿಐ ತನಿಖೆಯನ್ನು ಮಾಡಬೇಕೆಂದು ನಾವು ಮುಂದಿಟ್ಟಿದ್ದೇವೆ. ತಾವುಗಳು ದಯಮಾಡಿ ಎಲ್ಲಾ ಇಲಾಖೆಗಳಲ್ಲಿ, ಕ್ಯಾಬಿನೆಟ್‌ನಲ್ಲಿ ಪರಿಶೀಲನೆ ಮಾಡಿ, ಆ ಮೇಲೆ ಇದರ ಬಗ್ಗೆ ಹೇಳಿ. This is independent of that. ನಾವು ಹೇಳತಕ್ಕಂಥಾದ್ದು ಏನು? ಸನ್ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಶಾಸನ ಸಭೆಯು ಪ್ರಮುಖ ಪಕ್ಷಗಳ ನಾಯಕರ ನಿಯೋಗ ಹೋದರೆ ಬಹಳ ಒಳ್ಳೆಯದು. ಹಾಗೆ ಮಾಡಿದರೆ ಎಲ್ಲರೂ ಅಲ್ಲಿನ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಬಹುದು. ಆದರೆ ಸಿಬಿಐ ವಿಚಾರ ಏನು ಇದೆ, It is still open. ಯಾಕೆಂದರೆ ಅದನ್ನು ನೀವು ಪರಿಶೀಲನೆ ಮಾಡಬೇಕು. ಅವರು ಬಂದು ಹೊಸ ಬೆಳಕು ಚೆಲ್ಲಬಹುದು. ಅದು ಪರವಾಗಿ ಇರಬಹುದು ಅಥವಾ ವಿರೋಧವಾಗಿಯೂ ಇರಬಹುದು. ಅಥವಾ ಕ್ಯಾಬಿನೆಟ್ ವಿಚಾರ ಮಾಡಬಹುದು. ಏಕೆಂದರೆ, ಒಬ್ಬ ಇಂಡಿವಿಜ್ಯುವಲ್ ಚೀಫ್‌ಮಿನಿಸ್ಟರ್‌ರವರ ವಾದವೇ ಕ್ಯಾಬಿನೆಟ್‌ನ ವಾದ ಇರುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗುತ್ತದೆ. ಅದನ್ನು ಓವರ್‌ರೂಲ್ ಮಾಡಬಹುದು. ಅನೇಕ ಸಾರಿ ಆ ಪಾರ್ಟಿಯೇ ಮಂತ್ರಿಗಳ ವಿರುದ್ಧ . . . . ಈ ದೇಶದಲ್ಲಿ ನಡೆದಿದೆ. ಅನೇಕ ಕ್ಯಾಬಿನೆಟ್‌ಗಳಲ್ಲಿ ನಡೆದಿದೆ. ಅವರ ವಿರುದ್ಧವೇ ಸಿಬಿಐ ಎನ್‌ಕ್ವೈರಿ ಆಗಲೀ, ಜ್ಯುಡಿಷಿಯಲ್ ಎನಕ್ವೈರಿ ಆಗಲೀ, ಮಾಡಿದ್ದು ಇದೆ. ಅಂಥಾದ್ದು ಆಗಲಿಲ್ಲ ಎಂದು ಹೇಳುವುದು ಸರಿ ಅಲ್ಲ. ಆದ್ದರಿಂದ ನಾವು ಹೇಳಿದ್ದನ್ನು ಅವರು ಒಪ್ಪಲೇ ಬಾರದು ಎಂದು ಇಲ್ಲ. ಮತ್ತೊಂದು ಪ್ರಸಂಗ ನಡೆದಿದೆ, ನಾನು ಅದನ್ನು ಗಮನಿಸುತ್ತಾ ಇದ್ದೇನೆ. ಇದು ಯಾವಾಗಲೂ ಕೂಡ ನಡೆಯುವುದಿಲ್ಲ. ವಿರೋಧಪಕ್ಷದವರು ಒಂದು ತಮಾಷೆ ಮಾಡುತ್ತಾರೆ, ಅದಕ್ಕೆ ಇವರು ಒಂದು ಕೌಂಟರ್ ತಮಾಷೆಯನ್ನು ಮಾಡುತ್ತಾರೆ, ಇವರು ಧರಣಿ ಮಾಡುತ್ತಾರೆ, ಇವರು ವಾಕ್‌ಔಟ್ ಮಾಡುತ್ತಾರೆ, ಎಂದು ಆಗಬಾರದು. ಯಾವುದೇ ಒಂದು ವಿಚಾರ ಸದನಕ್ಕೆ ಬಂದಾಗ, ಅದರಲ್ಲಿಯೂ ಒಂದು ಸಮಿತಿಯವರು ವರದಿ ಕೊಟ್ಟಾಗ, ಅದನ್ನು ಗಂಭೀರವಾಗಿ ಚಿಂತನೆ ಮಾಡಲು ತಯಾರಾಗಿಲ್ಲ ನಮಗೆ ಅನೇಕ ಭಾರಿ ಅನ್ನಿಸುತ್ತದೆ ಮತ್ತು ಆ ಕುರಿತು ಮಾತನ್ನು ಆಡಿದ್ದೇವೆ. ಧರಣಿ ಯಾಕೆ ಮಾಡಬೇಕು? ವಾಕ್‌ಔಟ್ ಏಕೆ ಮಾಡಬೇಕು? ಹೀಗೆ ಏನು ಮಾಡಿದರೂ ಕೂಡ ಸರಕಾರ ಅದನ್ನು ಗಂಭೀರವಾಗಿ

ಪರಿಗಣಿಸುವುದೇ ಇಲ್ಲ. ಅದೆಲ್ಲಾ ಸೆಟ್ ಆಗಿಬಿಟ್ಟಿದೆ. ಏಕೆಂದರೆ ನಾವೂ ಕೂಡ ಸರಕಾರ ನಡೆಸಿದವರೂ ತಾವುಗಳೂ ಕೂಡ ಸರಕಾರವನ್ನು ನಡೆಸುತ್ತಿರುವವರು ಯಾವುದೇ ಒಂದು ವಿಚಾರವನ್ನು ನಾವು ಯಾರೇ ಪ್ರಸ್ತಾಪ ಮಾಡಿದಾಗ ಅದನ್ನು ಗಂಭೀರವಾಗಿ ಆಲೋಚನೆ ಮಾಡಿದ್ದು ಇದೆ. ಅಪೋಸಿಷನ್‌ರವರು ಸರಿ ಎಂದು ಕಂಡು ಬಂದು ಸರಕಾರದವರು ಸರಿ ಅಲ್ಲ ಎಂದು ಇದ್ದರೂ ಕೂಡ ಅಪೋಸಿಷನ್‌ರವರ ವಾದವನ್ನು ಒಪ್ಪಿದಂಥ ಅನೇಕ ಪ್ರಸಂಗಗಳು ಇನೆ. ಇತ್ತೀಚಿನ ಸದನದ ಕಾರ್ಯಕಲಾಪಗಳನ್ನು ನೋಡಿದರೆ, ಒಂದು ತರಹ ನೆಗೆಟಿವ್ ಆಗಿ ಕಾಣುತ್ತಿದೆ. ಆದ್ದರಿಂದ ಒಂದು ತರಹದಲ್ಲಿ ಅಪೋಸಿಷನ್ ಕೂಡ ನೆಗೆಟೀವ್, ಮತ್ತು ಸರಕಾರದವರೂ ಕೂಡ ಈ ರೀತಿಯಲ್ಲಿ ವಿಚಾರ ಮಾಡಿದರೆ ಯಾವ ರೀತಿಯಲ್ಲಿಯೂ ಸಮಸ್ಯೆಗೆ ಪರಿಹಾರವನ್ನು ಹುಡುಕಲು ಆಗುವುದಿಲ್ಲ. ಆ ಒಂದು ಸಂದಿಗ್ಧತೆಯಲ್ಲಿ ಸಭಯು ನಡೆಯುತ್ತಾ ಇದೆ. ಆದ್ದರಿಂದ ತಾವುಗಳು ಅಗತ್ಯವಾಗಿ ಇದರ ಬಗ್ಗೆ ಪ್ರವೇಶ ಮಾಡಬೇಕಾಗುತ್ತದೆ. ಇದು ಗಂಭೀರವಾದ ವಿಚಾರವಾಗಿರುವುದರಿಂದ ಸರಕಾರವೂ ಕೂಡ ಇದಕ್ಕೆ ಸಂಬಂಧಪಟ್ಟಂತೆ ಸ್ಪಂದಿಸತಕ್ಕ ಸರಕಾರ ಆಗಬೇಕು. ಈ ಸದನದಲ್ಲಿ ಅವರು ಸ್ಪಂದಿಸಬೇಕು. ಹೊರಗೆ ಸ್ಪಂದಿಸುತ್ತಾರೋ ಇಲ್ಲವೋ ಎಂಬ ಬಗ್ಗೆ ತಮಗೂ ನಮಗೂ ಕಂಟ್ರೋಲ್ ಇರುವುದಿಲ್ಲ. ಆದರೆ ಸದನದಲ್ಲಿ ಯಾವ ವಿಚಾರಗಳ ಬಗ್ಗೆ ಅವರು ಸ್ಪಂದಿಸಬೇಕು ಅದಕ್ಕೆ ಅವರು ಸ್ಪಂದಿಸದೇ ಇದ್ದರೆ, ಯಾವುದೇ ಅಯುಧವನ್ನು ಉಪಯೋಗ ಮಾಡಿದರೂ ಕೂಡ ಆಗದೇ ಇರತಕ್ಕಂಥ ಪರಿಸ್ಥಿತಿಯು ಇವೊತ್ತು ಸದನದಲ್ಲಿ ನಡೆಯುತ್ತಿರುವಾಗ ಅದನ್ನು ಬಹಳ ವಿಷಾದನೀಯ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ನಾವು ಇಲ್ಲಿ ಇವೊತ್ತು ನಾಳೆ ಇಡೀ ದಿನವೂ ಕುಳಿತುಕೊಂಡರು ಕೂಡ ಅದಕ್ಕೆ ಸ್ಪಂದನೆ ಇಲ್ಲದೆ ವ್ಯರ್ಥವಾಗುತ್ತದೆ. ಆದರಿಂದ ಸದನದ ಮತ್ತು ನಮ್ಮ ಸಮಯ ವ್ಯರ್ಥವಾಗುತ್ತದೆ. ಎಷ್ಟೇ ಒತ್ತಾಯ ಮಾಡಿದರೂ ಕೂಡ ಅವರ ನೀತಿ ಒಂದೇ ಆಗುತ್ತದೆ. ಒಟ್ಟಿನಲ್ಲಿ ವಿರೋಧ ಪಕ್ಷದವರು ಏನು ಹೇಳುತ್ತಾರೆ ಅದನ್ನು ಒಪ್ಪಬಾರದು. ಈ ರೀತಿಯಲ್ಲಿ ಸದನವು ನಡೆದುಕೊಂಡು ಹೋದರೆ ಸದನ ಇರುವುದೇ ವ್ಯರ್ಥ. ಈ ವ್ಯಥೆಯನ್ನು ನಾನು ತೋಡಿಕೊಳ್ಳಬೇಕೆಂದು ಇದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯಿಲಿಯವರು ಎರಡು ಸಲಹೆಗಳನ್ನು ಮಾಡಿದ್ದಾರೆ. ಒಂದು ಈ ವಿಚಾರವನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಬೇಕು. ಎಂದಾಗಿದೆ. ತಮ್ಮ ಗಮನಕ್ಕೆ ತರುವುದಾದರೆ ಇನ್‌ಫಾರ್ಮಲ್ ಆಗಿ ನಾವು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದೇವೆ. ಮಾನ್ಯ ಮೊಯಿಲಿಯವರು ಸಲಹೆ ಕೊಟ್ಟಿದ್ದಾರೆ. ಅಂದಾಜು ಸಮಿತಿಯ ರಿಪೋರ್ಟ್‌ನ ಬಗ್ಗೆ ಕನ್‌ಸರ್ನಡ್ ಡಿಪಾರ್ಟ್‌ಮೆಂಟ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಒಪೀನಿಯನ್‌ನನ್ನು ತೆಗೆದುಕೊಂಡು ಫಾರ್ಮಲ್ ಆಗಿ ನಾವು ಸಚಿವಸಂಪುಟದಲ್ಲಿ ತೆಗೆದುಕೊಂಡು ಚರ್ಚೆ ಮಾಡಿ ಅಂತಿಮ ತೀರ್ಮಾನಕ್ಕೆ ಬರಬೇಕೆಂಬ ಸಲಹೆ ಮಾಡಿದ್ದಾರೆ. ಅವರು ಕೊಟ್ಟ ಸಲಹೆಯನ್ನು ಸರಕಾರ ಒಪ್ಪಿಕೊಳ್ಳುತ್ತದೆ. ಈಗ ನಾವು ಇನ್‌ಫಾರ್ಮಲ್ ಆಗಿ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿದ್ದೇವೆ, ಫಾರ್ಮಲ್ ಆಗಿ ಸಂಬಂಧಪಟ್ಟ ಇಲಾಖೆ ಹಾಗೂ ಆರ್ಥಿಕ ಇಲಾಖೆಯವರ ಒಪ್ಪಿಗೆಯನ್ನು ತೆಗೆದುಕೊಂಡು ಸಚಿವಸಂಪುಟದ ಮುಂದೆ ಹೋಗಿ ಚರ್ಚೆ ಮಾಡುವುದಕ್ಕೆ ಸರಕಾರವು ಒಪ್ಪಿದೆ. ಮಾನ್ಯ ಮೊಯಿಲಿಯವರು ವಿರೋಧ ಪಕ್ಷದವರು ಕೊಟ್ಟ ಸಲಹೆಯನ್ನು ಸರಕಾರ

ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಈಗ ಅವರು ಕೊಟ್ಟ ಸಲಹೆಯನ್ನು ಸರಕಾರ ಒಪ್ಪುತ್ತದೆ. ಹೀಗೆ ಅವರು ಕೊಟ್ಟ ಸಲಹೆಯನ್ನು ಒಪ್ಪಿದ್ದರಿಂದ ಈಗಲಾದರೂ ಮಾನ್ಯ ಸದಸ್ಯರುಗಳು ತಾವ ಕೈಗೊಂಡ ಧರಣಿಯನ್ನು ಮುಕ್ತಾಯ ಮಾಡಿ ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕೆಂದು ತಮ್ಮ ಮುಖಾಂತರ ಅವರುಗಳಲ್ಲಿ ಮನವಿ ಮಾಡಿಕೊಳುತ್ತೇನೆ. ಮಾನ್ಯ ಅಧ್ಯಕ್ಷರೇ ಅವರು ಸಲಹೆಗಳನ್ನು ಕೊಟ್ಟರು. ನಾವು ಇನ್‌ಫಾರ್ಮಲ್ ಆಗಿ ಚರ್ಚೆ ಮಾಡಿದ್ದೇವೆ ಎಂದು ಹೇಳಿದ್ದಕ್ಕೆ ಫಾರ್ಮಲ್ ಆಗಿ ಚರ್ಚೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಂಡಿದ್ದೇವೆ.

ಅಧ್ಯಕ್ಷರು : ತಾವು ಹೇಳಿದ್ದೀರಿ, ಈಗ ಒಂದು ಕೆಲಸ ಮಾಡೋಣ. We will just assemble for 10 minutes in my office. I will take the leader of opposition and his colleagues into confidence. We will come back after 15 minutes.

ಈಗ ಸದನವನ್ನು ಮುಂದೂಡಿದ್ದೇನೆ. 15 ನಿಮಿಷಗಳ ನಂತರ ಸದನವು ಪುನಃ ಸಮಾವೇಶಗೊಳ್ಳುತ್ತದೆ.

(ಸದನವು 10-55ಕ್ಕೆ ಮುಂದೂಡಲ್ಪಟ್ಟು ಪುನಃ 11-10 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿರ್ಧರಿಸಿತು.)

(ಸದನವು 11.20ಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರಾದ **(ಶ್ರೀ ರಮೇಶ್ ಕುಮಾರ್)** ರವರು ಅಧ್ಯಕ್ಷಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ತಾವು ಸದನದ ಎಲ್ಲಾ ಕಡೆಯಿಂದ ಬಂದಂತಹ ಅಭಿಪ್ರಾಯದಂತೆ ಈಗ ಉಪಚುನಾವಣೆ ಇದೆ. ತಾವೆಲ್ಲರೂ ಬಿಜಿ ಆಗಿರುತ್ತೀರಿ. ಚುನಾವಣೆ ಮುಗಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದ್ದಾರೆ ನಾನೂ ಬರಬೇಕೆಂದು. ಅದು ಚೆನ್ನಾಗಿ ಕಾಣುವುದಿಲ್ಲ. ಮುಖ್ಯಮಂತ್ರಿಗಳ ನೇತೃತ್ವದಲ್ಲಿಯೇ ತಾವೆಲ್ಲಾ ಫ್ಲೋರ್ ಲೀಡರ್ಸ್ ಸೇರಿಕೊಂಡು, you can fix some date convenient to all of you to go to the spot and come. ಉಳಿದಿದ್ದುದ್ದನ್ನು ತಾವೇ ಪ್ರೊಸಿಜರ್ಸ್ ಏನು ಸಬ್‌ಸ್ಟ್ ಮಾಡಿದ್ದೀರಿ, I think the government will respect your views. ತಾವು ಒಂದು ಮಾತು ಹೇಳಿದ್ದೀರಿ. ಅದನ್ನು ನಾನೂ ಕೂಡ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇನೆ. ಸಮಿತಿಯ ವರದಿಗಳನ್ನು ಯಾವುದೇ ಕಾರಣಕ್ಕೂ ಯಾವುದೇ ಸಂದರ್ಭದಲ್ಲಿಯೂ ಕೂಡ ಯಾರೂ ಲಘುವಾಗಿ ಕಾಣತಕ್ಕ ಪ್ರವೃತ್ತಿಯನ್ನು ನಾವು ಬೆಳಸಲಿಕ್ಕೆ ಸಾಧ್ಯ ಇಲ್ಲ. We cannot tolerate it. Therefore, I appeal to you, ಉಳಿದ ಕೆಲಸ ನೆಡೆಸುವ ದೃಷ್ಟಿಯಿಂದ ತಾವು ಸಹಕರಿಸಿ ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕೆಂದು ಕೇಳಿಕೊಳ್ಳುತೇನೆ. Kindly co-operate.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ಈಗಾಗಲೇ ತಮ್ಮ ಜೊತೆಯಲ್ಲಿ ಮಾತುಕತೆ ಆದ ಮೇಲೆ ನಾನೂ ಕೂಡ ನಮ್ಮ ಎಲ್ಲಾ ಶಾಸ

ಮಿತ್ರರುಗಳ ಜೊತೆ ಚರ್ಚೆ ಮಾಡಿದೆ. ಒಂದು ವಿಚಾರ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿಯೇ ಎಲ್ಲಾ ಫ್ಲೋರ್ ಲೀಡರ್ಸ್ ಕೂಡ ಅಲ್ಲಿ ಯುಕೆಪಿ ಕಾಮಗಾರಿಗಳ ಬಗ್ಗೆ ಪರಿಶೀಲನೆ ನೆಡೆಸಿ ಮತ್ತು ಯಾವ ರೀತಿಯಾಗಿ ಇವತ್ತು ಕೆಲಸ ಮಾಡುತ್ತಿದ್ದಾರೆ ಅಥವಾ ಕೆಲವು ಭಾಗದಲ್ಲಿ ಕೆಲಸ ನಿಂತು ಹೋಗಿದೆ ಮತ್ತು ನಿಗಮ ಕೂಡ ಇವತ್ತಿನ ದಿವಸ ಹೆಚ್ಚಿನ ಆಸಕ್ತಿ ವಹಿಸಿ ಹಣ ಕೂಡ ಬಿಡುಗಡೆ ಮಾಡುತ್ತಿಲ್ಲ. ಇದೆಲ್ಲದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹೋಗಿ ಭೇಟಿ ಕೊಡತಕ್ಕದ್ದು ಇದು ಒಂದು ಭಾಗ. ಆದರೆ ಇನ್ನೊಂದು ಭಾಗ ಆ ಎರಡು ಸರ್ಕಾರಿ ಆಜ್ಞೆಗಳು 13ನೇ ತಾರೀಖು ಮತ್ತು 25ನೇ ತಾರೀಖು ಜಾರಿಗೊಳಿಸಿದ್ದು, ಅವೆರಡೂ ಕೂಡ ಸರ್ಕಾರದವರು ಗಂಭೀರವಾಗಿ ತೆಗೆದುಕೊಂಡು ಮತ್ತು ಅಂದಾಜು ಸಮಿತಿಯ ಶಿಫಾರಸ್ಸಿನ ಮೇರೆಗೆ ಕ್ಯಾಬಿನೆಟ್ ಮುಂದೆ ಇಟ್ಟು ಚರ್ಚೆ ಮಾಡಿ ಇದನ್ನು ಸಿಬಿಐಗೆ ವಹಿಸಿಕೊಡತಕ್ಕದ್ದರ ಬಗ್ಗೆ ಅವರು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಶ್ರೀಮಾನ್ ನಾಗೇಗೌಡರು ಈ ಸದನದಲ್ಲಿ ಹೇಳಿದ್ದಾರೆ. ಕ್ಯಾಬಿನೆಟ್ ತೀರ್ಮಾನ ಬಂದ ನಂತರ ಪರಿಶೀಲನೆ ಮಾಡಿ ವಹಿಸುತ್ತೇವೆಂದು ಹೇಳಿದಿರಿ, ನಿಮ್ಮ ದೃಷ್ಟಿಯಲ್ಲಿ ಯೋಗ್ಯ ಅಯೋಗ್ಯವೆಂಬ ಮಾತು ಬೇರೆ. ಆದರೆ ಕ್ಯಾಬಿನೆಟ್ ಮುಂದೆ ಚರ್ಚಿಸಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಿದ್ದೀರಿ. ಮತ್ತೆ ಈಗ ಏಕೆ ಪಲ್ಟಿ ಹೊಡೆಯುತ್ತಿದ್ದೀರಿ?

ಶ್ರೀ ಕೆ.ಎನ್. ನಾಗೇಗೌಡ : ಪಲ್ಟಿ ಅಲ್ಲ, ರೆಕಾರ್ಡ್ ಸರಿಯಾಗಿರಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಮಾತನಾಡುತ್ತಾ ಒಬ್ಬ ಮಿನಿಸ್ಟರ್ ಆಗಲಿ, ಚೀಫ್ ಮಿನಿಸ್ಟರ್ ಆಗಲಿ. ಎಸ್ಟಿಮೇಟ್ ಕಮಿಟಿ ವಿಚಾರದಲ್ಲಿ ಮಾತನಾಡುವುದು ಸೂಕ್ತವಲ್ಲ, ಇದನ್ನು ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗಿ ಫಾರ್ಮಲ್ ಆಗಿ ಡಿಸ್‌ಕಸ್ ಮಾಡಿ ಅಭಿಪ್ರಾಯಕ್ಕೆ ಬರಬೇಕೆಂದು ಸಲಹೆ ಕೊಟ್ಟರು. ಅದಕ್ಕೋಸ್ಕರ ನಾನು ಹೇಳಿದ್ದು. ಇನ್‌ಫಾರ್ಮಲ್ ಆಗಿ ಮಂತ್ರಿ ಮಂಡಲದಲ್ಲಿ ಚರ್ಚಿಸಿ, ಇದನ್ನು ಸಿ.ಬಿ.ಐ.ಗೆ ವಹಿಸುವುದು ಸಾಧುವಲ್ಲ ಎಂಬುದನ್ನು ತೀರ್ಮಾನ ಮಾಡಿದ್ದೇವೆ. ಆದರೆ, ಅವರು ಫಾರ್ಮಲ್ ಆಗಿ ಕನ್‌ಸರ್ನ್ಡ್ ಡಿಪಾರ್ಟ್‌ಮೆಂಟ್, ಜೊತೆ ಅಂದರೆ ಫೈನಾನ್ಸ್ ಡಿಪಾರ್ಟ್‌ಮೆಂಟ್, ಲಾ ಡಿಪಾರ್ಟ್‌ಮೆಂಟ್‌ಗಳ ಕೊತೆ ಚರ್ಚಿಸಿ ತದನಂತರ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳಿದೆ. ಇನ್‌ಫಾರ್ಮಲ್ ಆಗಿ ಮಾಡಿರುವುದನ್ನು ಫಾರ್ಮಲ್ ಆಗಿ ಮಾಡುತ್ತೇವೆಂದು ನಾನು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂದರೆ, ಇನ್‌ಫಾರ್ಮಲ್ ಆಗಿ ರಿಜೆಕ್ಟ್ ಮಾಡಿರುವುದನ್ನು ಫಾರ್ಮಲ್ ಆಗಿ ರಿಜೆಕ್ಟ್ ಮಾಡುತ್ತೇವೆಂದು ಹೇಳಿದಂತಾಯಿತು. ಎಕ್ಸಾಮಿನ್ ಮಾಡಿ ಇದನ್ನು [redacted] ಮಾಡುವುದಕ್ಕೆ ಯೋಗ್ಯವಿದೆಯೇ, ಇಲ್ಲವೇ, ಎಂಬ ಬಗ್ಗೆ ತೀರ್ಮಾನ ಮಾಡುತ್ತೇವೆಂದು ಹೇಳಬೇಕಲ್ಲಾ. The decision, after all, the cabinet will take. ಈಗಾಗಲೇ ನಾವು ಇನ್‌ಫಾರ್ಮಲ್ ಆಗಿ ರಿಜೆಕ್ಟ್ ಮಾಡಿದ್ದು, ಅದಕ್ಕೆ ಫಾರ್ಮಲ್ ಆಗಿ ನ್‌ಸಲ್ಟ್ ಮಾಡುತ್ತೇವೆಂದು ನೀವು ಹೇಳಿದ್ದೀರಿ. That is a negative approach. ನಮ್ಮ

ಬೇಡಿಕೆಯೇನೂ ದೊಡ್ಡದಲ್ಲ.

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಜೊತೆ ಬರುತ್ತಿರುವುದರಿಂದ ತಾವು ಸ್ಥಳದ ವೀಕ್ಷಣೆಗೆ ಹೋಗುವುದಾಗಲೀ, ಈ ಎರಡೂ ಸರ್ಕಾರದ ಆದೇಶಗಳಲ್ಲಿ ಕವರ್ ಮಾಡಿರುವ ವರ್ಕ್ಸ್ ಅನ್ನು you take up detailed discussion. I don't think any chief Minister, ತಾವು ಹೇಳತಕ್ಕಂಥಾದರಲ್ಲಿ ಏನಾದರೂ ಇದ್ದು ಕಾಣಿಸಿದರೆ ಸರ್ಕಾರಿ ಆದೇಶದಲ್ಲಿ ಕವರ್ ಆಗಿರುವ ವರ್ಕ್ಸ್‌ನಲ್ಲಿ I think you can further pursue the Chief Minister to agree to your suggestion. ಮೆಟೀರಿಯಲ್ ಎವಿಡೆನ್ಸ್ ನಿಮ್ಮ ಕಣ್ಣೆದುರಿಗೆ ಇದ್ದಾಗ no Chief Minister should hesitate.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫಿಸಿಕಲ್ ಪ್ರೋಗ್ರೆಸ್ ನಮ್ಮ ಕಣ್ಣಿಗೆ ಕಾಣುತ್ತದೆ. ಆದರೆ, ಲೀಗಲಿ ಎರಡೂ ಜಿ.ಓ.ಗಳಲ್ಲಿ ಏನು ಲಕ್ಯುನಾ ಇದೆ, ಯಾವ ದೃಷ್ಟಿಯಿಂದ ಇದು ಆಯಿತೆಂಬ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುವುದು ಬೇರೆ ವಿಚಾರ, ಅದಕ್ಕಾಗಿ ಆ ಇಶ್ಯೂವನ್ನು ನಾವು ಓಪನ್ ಇಟ್ಟಿದ್ದೇವೆ, ಅದಕ್ಕೆ ಒಪ್ಪಲಿಲ್ಲ. ಈಗ ಸದನದ ಕಲಾಪ ನಡೆಯಬೇಕು, ಸ್ಥಗಿತಗೊಳ್ಳಬಾರದು, ಅಧಿವೇಶನ ಮುಗಿಯುವುದಕ್ಕೆ ಇನ್ನು 3-4 ದಿವಸಗಳಿರುವುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಮುಖ್ಯಮಂತ್ರಿಗಳೂ ಕೂಡ ತಮ್ಮ ಬೇಡಿಕೆಗಳನ್ನು ಮಂಡಿಸಿದರೆ ಅದರ ಮೇಲೂ ಕೂಡ ನಾಳೆ, ನಾಡಿದ್ದು ಚರ್ಚೆ ನಡೆಯುತ್ತದೆ. ಆದುದರಿಂದ, ಕನಿಷ್ಠ ಪಕ್ಷ ಇಷ್ಟಾದರೂ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ತಮ್ಮ ಕೊಠಡಿಯಲ್ಲಿ ನಡೆದಂಥ ಚರ್ಚೆಯ ಆಧಾರದ ಮೇಲೆ ನಾನೂ ಕೂಡ ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗ ಈ ಸದನದ ನಡವಳಿಕೆ ಜರುಗಬೇಕು ಮತ್ತು ಬೇರೆ ಕಾರ್ಯಕ್ರಮಗಳಿಗೆ ನಾವು ಅನುವು ಮಾಡಿಕೊಡಬೇಕೆಂಬ ದೃಷ್ಟಿಯಿಂದ ನಮ್ಮ ಧರಣಿಯನ್ನು ಹಿಂತೆಗೆದುಕೊಳ್ಳುತ್ತಿದ್ದೇವೆಯೇ ವಿನಃ ಬೇರಾವುದೇ ಕಾರಣಕ್ಕೂ ಕೂಡ ಇಲ್ಲ ಅಥವಾ ಸಿ.ಬಿ.ಐ. ಎನ್‌ಕ್ವೈರಿಗೆ ಡಿಮ್ಯಾಂಡ್ ಮಾಡುವ ವಿಚಾರ ಇಲ್ಲಿಗೆ ಮುಕ್ತಾಯವಾಗುತ್ತದೆಂಬ ಪ್ರಶ್ನೆ ಬರುವುದಿಲ್ಲ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಕ್ಯಾಬಿನೆಟ್ ಮುಂದಿಡುತ್ತೇವೆಂದು ಅವರು ಆಶ್ವಾಸನೆ ಕೊಟ್ಟಿದ್ದಾರೆ ಅದನ್ನು ಕಾದು ನೋಡುತ್ತೇವೆ. ಈ ದಿಸೆಯಲ್ಲಿ ತಾವು ಏನು ಮನವಿ ಮಾಡಿದಿರಿ, ಈ ಒಂದು ಜಟಿಲ ಸಮಸ್ಯೆಯನ್ನು ಬಿಡಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡಿದ್ದಕ್ಕಾಗಿ ತಮಗೂ ಕೂಡ ಈ ಸಂದರ್ಭದಲ್ಲಿ ಅಭಿನಂದಿಸಿ, ಸದನದ ಮುಂದಿನ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡಲು ಮಾನ್ಯ ಸದಸ್ಯರುಗಳು ತಮ್ಮ ಪೀಠಕ್ಕೆ ತೆರಳಬೇಕೆಂದು ನಮ್ಮ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಮನವಿ ಮಾಡುತ್ತೇನೆ.

(ಈ ಹಂತದಲ್ಲಿ ಧರಣಿ ಕುಳಿತಿದ್ದ ಮಾನ್ಯ ಸದಸ್ಯರುಗಳೆಲ್ಲರೂ
ತಮ್ಮ ತಮ್ಮ ಪೀಠಗಳಿಗೆ ತೆರಳಿದರು)

ಅಧ್ಯಕ್ಷರು : ಧನ್ಯವಾದಗಳು. ಈಗ ಪ್ರಶ್ನೋತ್ತರ.